# ನಗದು ವಹಿವಾಟಿಗೆ ‘ಆಧಾರ್’ ಆಧಾರ

ಹಣ ವರ್ಗಾವಣೆ ವಿಧಾನವನ್ನು ಬೆರಳತುದಿಗೆ ತಂದು ನಿಲ್ಲಿಸಿದ ‘ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ’ (ಎನ್‌ಪಿಸಿಐ) ರಿಮೋಟ್ ಏರಿಯಾಗಳಲ್ಲೂ (ಕುಗ್ರಾಮ) ಸುಲಭವಾಗಿ ಹಣ ವಿತ್‌ಡ್ರಾ ಮಾಡಲು ಅನುಕೂಲವಾಗುವಂತೆ ಹೊಸ ಯೋಜನೆಯೊಂದನ್ನು ಪರಿಚಯಿಸಿದೆ. ಅದುವೇ ‘ಆಧಾರ್ ಎನೇಬಲ್ಡ್ ಪೇಮೆಂಟ್ ಸಿಸ್ಟಂ’ (ಎಇಪಿಎಸ್).

ದೇಶದ ಹಲವು ಕಡೆ ಆಧಾರ್ ಮೈಕ್ರೊ ಎಟಿಎಂ ಮತ್ತು ಎಇಪಿಎಸ್‌ಗಳನ್ನು ಈಗಾಗಲೇ ಅಳವಡಿಸಲಾಗಿದೆ. ಜನರು ಈ ಮೈಕ್ರೊ ಎಟಿಎಂ ಮತ್ತು ಎಇಪಿಎಸ್‌ಗಳಿರುವ ಜಾಗಕ್ಕೆ ಹೋಗಿ, ಅಲ್ಲಿನ ಏಜೆಂಟ್‌ಗೆ ತಮ್ಮ ಆಧಾರ್ ಸಂಖ್ಯೆ ನೀಡಿ, ಸುಲಭವಾಗಿ ಹಣ ವಿತ್‌ಡ್ರಾ ಮಾಡಿಕೊಳ್ಳಬಹುದಾಗಿದೆ.

ಡಿಜಿಟಲ್ ಮೂಲಕ ಹಣ ವರ್ಗಾವಣೆ ಮಾಡಲು ಹಲವಾರು ಆ್ಯಪ್‌ಗಳಿವೆ. ಇವುಗಳ ಮೂಲಕ ದೈನಂದಿನ ವ್ಯವಹಾರ ನಡೆಸುತ್ತಿದ್ದರೂ, ಕೆಲವೊಮ್ಮೆ ಜನರಿಗೆ ನಗದು ಅತ್ಯಗತ್ಯವಾಗಿರುತ್ತದೆ. ಅದಕ್ಕಾಗಿ ಅವರು ಎಟಿಎಂ ಅಥವಾ ಬ್ಯಾಂಕ್‌ಗಳ ಮೇಲೆ ಆಶ್ರಯವಾಗುವುದು ಸರ್ವೇ ಸಾಮಾನ್ಯ. ಒಂದು ಅಂದಾಜಿನ ಪ್ರಕಾರ ಆನ್‌ಲೈನ್ ಪೇಮೆಂಟ್ಸ್ ವ್ಯವಸ್ಥೆಯಿದ್ದರೂ ದೇಶದಲ್ಲಿ ಬಹುದೊಡ್ಡ ಸಂಖ್ಯೆಯ ಜನರು ನಗದು ವ್ಯವಹಾರವನ್ನೇ ಹೆಚ್ಚಾಗಿ ನೆಚ್ಚಿಕೊಂಡಿದ್ದಾರೆ.

ನಗದಿಗಾಗಿ ಎಟಿಎಂ ಮತ್ತು ಬ್ಯಾಂಕ್‌ಗಳ ಮೇಲೆ ಅವಲಂಬಿತರಾಗುವುದನ್ನು ತಪ್ಪಿಸಲು, ಬ್ಯಾಂಕ್ ಸೇವೆ ಒದಗಿಸಲು ಸಾಧ್ಯವಾಗದಂತಹ ಪ್ರದೇಶಗಳಲ್ಲಿಯೂ ಜನರ ಕೈಗೆ ಸುಲಭವಾಗಿ ನಗದು ಸಿಗುವಂತೆ ಮಾಡುವ ಉದ್ದೇಶದಿಂದ ಎನ್‌ಪಿಸಿಐ ಜಾರಿಗೊಳಿಸಿದೆ.

ಎಇಪಿಎಸ್ ಮೂಲಕ ಬಳಕೆದಾರರರು ತಮ್ಮ ಆಧಾರ್ ಸಂಖ್ಯೆ ಮತ್ತು ಬಯೊಮೆಟ್ರಿಕ್ ದೃಢೀಕರಣದ ಮೂಲಕ ಬ್ಯಾಂಕಿಂಗ್ ವಹಿವಾಟು ನಡೆಸಬಹುದು. ಆಧಾರ್ ಕಾರ್ಡ್ ಕೈಯಲ್ಲಿ ಇಲ್ಲದಿದ್ದರೂ ಕೇವಲ ಆಧಾರ್ ಸಂಖ್ಯೆ ಮೂಲಕ ಹಣ ಪಡೆದುಕೊಳ್ಳಬಹುದು. ಹಣ ವಿತ್‌ಡ್ರಾ ಜೊತೆಗೆ ಬ್ಯಾಂಕ್ ಖಾತೆಯಲ್ಲಿನ ಬ್ಯಾಲೆನ್ಸ್ ಪರಿಶೀಲನೆ, ಹಣ ವರ್ಗಾವಣೆ, ಹಣ ಪಾವತಿ, ಮಿನಿ ಸ್ಟೇಟ್‌ಮೆಂಟ್, ಆಧಾರ್ ಟು ಆಧಾರ್ ಫಂಡ್ ಟ್ರಾನ್ಸ್‌ಫರ್ ಸೇರಿದಂತೆ ಇತರ ಕಾರ್ಯಗಳನ್ನು ಈ ವ್ಯವಸ್ಥೆ ಮೂಲಕವೇ ಮಾಡಬಹುದು. ಇದಕ್ಕಾಗಿ ಪ್ರತ್ಯೇಕವಾಗಿ ಬ್ಯಾಂಕ್‌ಗಳಿಗೆ ಅಲೆಯಬೇಕಿಲ್ಲ. ಇದಕ್ಕಾಗಿ ಜನರಿಗೆ ಏಜೆಂಟ್‌ಗಳ ನೆರವು ಸಿಗಲಿದೆ.

## ವಿತ್‌ಡ್ರಾ ಮಿತಿ ಎಷ್ಟು?

ಆಧಾರ್ ಸಂಖ್ಯೆ ಬಳಸಿ ಹಣ ವಿತ್‌ಡ್ರಾ ಮಾಡಲು ಇರುವ ಪ್ರತಿದಿನದ ಮಿತಿಯನ್ನು ಆಯಾ ಬ್ಯಾಂಕ್




**ಡಿಜಿಟಲ್ ಮೂಲಕ ಹಣ ವರ್ಗಾವಣೆ ಜನರ ಬದುಕಿನ ಅವಿಭಾಜ್ಯ ಅಂಗವಾಗಿದ್ದರೂ ಈಗಲೂ ಗಣನೀಯ ಸಂಖ್ಯೆಯ ಜನರು ಈ ವ್ಯವಸ್ಥೆಯಿಂದ ದೂರವೇ ಉಳಿದಿದ್ದಾರೆ. ಇಂಥವರಿಗಾಗಿ ‘ಎನ್‌ಪಿಸಿಐ’, ಆಧಾರ್ ಸಂಖ್ಯೆ ಮೂಲಕ ಹಣ ವಿತ್‌ಡ್ರಾ ಸೇವೆ ಒದಗಿಸಲು ಮುಂದಾಗಿದೆ.**

**■ ಶಶಿಕುಮಾರ್ ಸಿ.**

ನಿರ್ಣಯಿಸುತ್ತದೆ. 10 ಸಾವಿರದಿಂದ 50 ಸಾವಿರ ರೂಪಾಯಿವರೆಗೆ ವಿವಿಧ ಬ್ಯಾಂಕ್‌ಗಳಲ್ಲಿ ಈ ಮಿತಿ ಗೊತ್ತುಪಡಿಸಲಾಗಿದೆ. ಆದರೆ, ಕೆಲವು ಬ್ಯಾಂಕ್‌ಗಳು ಭದ್ರತಾ ಕಾರಣಗಳಿಂದ ಎಇಪಿಎಸ್ ಸೇವೆ ತಡೆಹಿಡಿದಿವೆ. ಎಇಪಿಎಸ್ ಸೌಲಭ್ಯವು ಬ್ಯಾಂಕಿಂಗ್ ಸೇವೆ ಸಮರ್ಪಕವಾಗಿರದೆ ಇರುವ ಗ್ರಾಮೀಣ ಪ್ರದೇಶಗಳಿಗೆ ವರದಾನವಾಗಲಿದೆ. ಜನರಿಗೆ ತುರ್ತು ಸಂದರ್ಭದಲ್ಲಿ ಹಣ ಬೇಕಾದಾಗ ಆಧಾರ್ ಸಂಖ್ಯೆ ಬಳಸಿ ಹಣ ಪಡೆಯಬಹುದಾಗಿದೆ.

## ಕೇಂದ್ರಗಳ ಬಗ್ಗೆ ಇರಲಿ ಎಚ್ಚರ

ವಂಚನೆ ನಡೆಸುವ ವ್ಯವಸ್ಥಿತ ಜಾಲವು ಸಕ್ರಿಯವಾಗಿದ್ದು, ನಕಲಿ ಎಇಪಿಎಸ್ ಅಥವಾ ಮೈಕ್ರೊ ಎಟಿಎಂ ಕೇಂದ್ರಗಳನ್ನು ಸ್ಥಾಪಿಸಿಕೊಂಡು ವಂಚನೆ ನಡೆಸುವುದು ಕಂಡುಬರುತ್ತಿದೆ. ಹೀಗಾಗಿ, ಜನರು ತಾವು ಸಂಪರ್ಕಿಸುವ ಕೇಂದ್ರಗಳ ಬಗ್ಗೆ ಎಚ್ಚರ ವಹಿಸುವುದು ಸೂಕ್ತ. ನಿಮ್ಮ ಆಧಾರ್ ಸಂಖ್ಯೆಯನ್ನು ಸಾರ್ವಜನಿಕಗೊಳಿಸದಂತೆ ನೋಡಿಕೊಳ್ಳಿ. ಅಧಿಕೃತ ಕೇಂದ್ರಗಳಲ್ಲಷ್ಟೇ ಅದನ್ನು ನೀಡಿ. ಜೊತೆಗೆ ನಿಮ್ಮ ಮೊಬೈಲ್ ನಂಬರ್ ಅನ್ನು ಆಧಾರ್ ಕಾರ್ಡ್‌ನೊಂದಿಗೆ ಜೋಡಣೆಯಾಗಿರುವ ಬಗ್ಗೆ ಕಾಲಕಾಲಕ್ಕೆ ಪರಿಶೀಲಿಸಿ. ಇದು ಅಪ್‌ಡೇಟ್ ಆಗದಿದ್ದರೆ ಕೂಡಲೇ ಆ ಬಗ್ಗೆ ಕ್ರಮವಹಿಸಿ. ಎಸ್‌ಎಂಎಸ್ ಅಲರ್ಟ್ ಬರುತ್ತಿರುವಂತೆ ನೋಡಿಕೊಳ್ಳಿ. ಫಿಂಗರ್‌ಪ್ರಿಂಟ್ ಸ್ಕ್ಯಾನರ್ ಬಗ್ಗೆಯೂ ಎಚ್ಚರವಿರಲಿ.

## ಹಣ ಪಡೆಯೋದು ಹೇಗೆ?

ಜನರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಎಇಪಿಎಸ್ ಅಥವಾ ಮೈಕ್ರೊ ಎಟಿಎಂ ಕೇಂದ್ರಗಳನ್ನು ಸಂಪರ್ಕಿಸಬೇಕು. ರಾಜ್ಯದ ಹಲವಾರು ಪ್ರದೇಶಗಳಲ್ಲಿ ಈ ವ್ಯವಸ್ಥೆಯಿದೆ. ಎಇಪಿಎಸ್ ಬೆಂಬಲ ನೀಡುವ ಬ್ಯಾಂಕಿಂಗ್ ಏಜೆಂಟ್ ಅಥವಾ ಮೈಕ್ರೊ ಎಟಿಎಂ ಕೇಂದ್ರಗಳನ್ನು ಹೆಚ್ಚಾಗಿ ಗ್ರಾಮೀಣ ಭಾಗಗಳಲ್ಲಿ ನಿರ್ಮಿಸಲಾಗುತ್ತಿದೆ. ಮೊಬೈಲ್ ಬ್ಯಾಂಕಿಂಗ್ ಸೇವೆ ನೀಡುವ ಬ್ಯಾಂಕ್‌ಗಳು ಕೂಡ ಎಇಪಿಎಸ್ ಸ್ಥಾಪಿಸುತ್ತಿವೆ. ಈ ಸೇವೆ ಪಡೆಯಲು ಬ್ಯಾಂಕ್ ಖಾತೆಯೊಂದಿಗೆ ನಿಮ್ಮ ಆಧಾರ್ ಕಾರ್ಡ್ ಮತ್ತು ಮೊಬೈಲ್ ಸಂಖ್ಯೆ ಜೋಡಣೆಯಾಗಿರುವುದು ಕಡ್ಡಾಯ.

- ಎಇಪಿಎಸ್ ಕೇಂದ್ರಗಳಲ್ಲಿ ಆಧಾರ್ ಸಂಖ್ಯೆ ನಮೂದಿಸಿ.
- ಫಿಂಗರ್‌ಪ್ರಿಂಟ್ ದೃಢೀಕರಣ ಮಾಡಿ.
- ವರ್ಗಾವಣೆ ವಿಧಾನವನ್ನು ಆಯ್ಕೆ ಮಾಡಿ. ದೃಢೀಕರಣ ಪೂರ್ಣಗೊಂಡ ಬಳಿಕ ಹಣ ವಿತ್‌ಡ್ರಾ ಆಯ್ಕೆ ಮಾಡಿ.
- ಮೊತ್ತ ನಮೂದಿಸಿ.
- ಹಣ ದೊರಕಿದ ನಿಮಗೆ ಎಸ್‌ಎಂಎಸ್ ಬರುತ್ತದೆ. ಅದನ್ನು ಖಚಿತಪಡಿಸಿಕೊಳ್ಳಿ.

■